**ದಿನಾಂಕಃ 23.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು**

**ಪಾಟೀ ಸವಾಲು ಅರೋಪಿಯವರ ಪರ ವಕೀಲರಿಂದಃ**

1. 2019 ರವರೆಗೆ ನಾನು ಹನಿವೇಲ್ ಟೆಕ್ನಾಲಜಿ ಲ್ಯಾಬ್ ಪ್ರೈ ಲಿಮಿಟೆಡ್ ನಲ್ಲಿ ಕೆಲಸ ಮಾಡುತ್ತಿದ್ದೇನು. ಅರೋಪಿಯವರು ನಾನು ಕೆಲಸಕ್ಕೆ ಸದರಿ ಲ್ಯಾಬ್ ನಲ್ಲಿ ಸೇರಿದ ನಂತರ ಅವರು ಕೆಲಸಕ್ಕೆ ಸೇರಿಕೊಂಡಿರುತ್ತಾರೆಂದರೆ ಸರಿ. ನಾನು ಹಾಗೂ ಅರೋಪಿಯವರು ಒಂದೇ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇವು. ಜಾಕ್ಸನ್ ಷಣ್ಮುಗಂ ಹಾಗೂ ಸಂಜಯ್ ಪ್ರಸಾದ್ ಇಬ್ಬರು ನನ್ನೊಂದಿಗೆ ಕೆಲಸ ಮಾಡುತ್ತಿದ್ದರು. ನಾನು ಕೆಲಸ ಮಾಡುತ್ತಿದ್ದ ವಿಬಾಗದಲ್ಲಿ ಅರೋಪಿಯವರು ಗುತ್ತಿಗೆಯ ಅಧಾರದಲ್ಲಿ ಅಟೆಂಡರ್ ಅಗಿ ಕೆಲಸ ಮಾಡುತ್ತಿದ್ದರು. ಅರೋಪಿಯವರ ಸ್ನೇಹಿತರಾದ ಸುರೇಶ್ ರವರ ಪರಿಚಯ ನನಗೆ ಇಲ್ಲ. ಅರೋಪಿಯವರು ಅವರ ಸ್ನೇಹಿತರೊಂದಿಗೆ ಟುಬ್ ಲೈಟ್ ಚೋಕ್ಸ್ ಕೆಲಸವನ್ನು ಮಾಡುತ್ತೇವೆಂದು ನನಗೆ ತಿಳಿಸಿದ್ದರು. ಅರೋಪಿಯವರು ಅವರ ಸ್ನೇಹಿತರೊಂದಿಗೆ ಕಚ್ಚಾ ವಸ್ತುಗಳನ್ನು ಖರೀದಿಸಿ ಕಚೇರಿ ಅವದಿಯ ನಂತರ ಅವುಗಳನ್ನು ಮಾರಾಟ ಮಾಡುವ ಕೆಲಸಗಳನ್ನು ಮಾಡುತ್ತಿದ್ದರು.

2. ಅರೋಪಿಯವರು ಯಾವ ವ್ಯವಹಾರವನ್ನು ನಡೆಸುತ್ತಿದ್ದರು ಎನ್ನುವ ವಿಚಾರ ನನಗೆ ಗೊತ್ತಿದೆ. ಅರೋಪಿಯವರು ನನ್ನ ಬಳಿ ಅವರ ವ್ಯವಹಾರದಲ್ಲಿ ಇನ್ ವೆಸ್ಟ್ ಮಾಡಿಯೆಂದು ನನಗೆ ತಿಳಿಸಿದ್ದರು. ಅದರಂತೆ ನಾನು ಅರಂಭದಲ್ಲಿ ರೂ 5 ಸಾವಿರ, ರೂ 10 ಸಾವಿರದಂತೆ ಅವರಿಗೆ ಹಣದ ಸಹಾಯವನ್ನು ಮಾಡುತ್ತಿದ್ದೇನು. ಅರೋಪಿಯವರ ವ್ಯವಹಾರದಲ್ಲಿ 3-4 ವರ್ಷಗಳ ನಂತರ ನನಗೆ ಅವರು ಇನ್ ವೆಸ್ಟ್ ಮಾಡಲು ತಿಳಿಸಿದಾಗ ನಾನು ಅದರಲ್ಲಿ ಇನ್ ವೆಸ್ಟ್ ಮಾಡಿರುತ್ತೇನೆ. ಅರೋಪಿಯವರು ನಾನು ರೂ 1 ಲಕ್ಷ ಹಣವನ್ನು ಇನ್ ವೆಸ್ಟ್ ಮಾಡಿದರೆ ನನಗೆ ರೂ 10 ಸಾವಿರ ಲಾಬಾಂಶ ನೀಡುತ್ತೇನೆಂದು ತಿಳಿಸಿದರು. ನಂತರ ರೂ 1 ಲಕ್ಷ ಮೊತ್ತಕ್ಕೆ ರೂ 15 ಸಾವಿರದಂತೆ ಲಾಬಾಂಶ ವ್ಯವಹಾರ ಹೆಚ್ಚಿದಂತೆ ನೀಡುತ್ತೇನೆಂದು ತಿಳಿಸಿದರು. ನನ್ನ ಹಾಗೂ ಅರೋಪಿಯವರ ನಡುವೆ ಇನ್ ವೆಸ್ಟ್ ಹಾಗೂ ಲಾಬಾಂಶದ ಬಗ್ಗೆ ಯಾವುದೇ ಕರಾರು ಅಗಿರುವುದಿಲ್ಲ.

3. ಜಾಕ್ಸನ್ ಷಣ್ಮುಗಂ ಹಾಗೂ ಸಂಜಯ್ ಪ್ರಸಾದ್‌ರವರು ಒಟ್ಟಾಗಿ ರೂ 20 ಲಕ್ಷದವರೆಗೆ ಅರೋಪಿಯವರ ವ್ಯವಹಾರದಲ್ಲಿ ಹಣವನ್ನು ವಿನಿಯೋಗ ಮಾಡಿರುತ್ತಾರೆ. ಜಾಕ್ಸನ್ ಷಣ್ಮುಗಂ ಹಾಗೂ ಸಂಜಯ್ ಪ್ರಸಾದ್‌ರವರು ಅರೋಪಿಯವರ ವಿರುದ್ದ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಅದರೆ ಅವರುಗಳು ನನಗೆ ಪ್ರಕರಣವನ್ನು ದಾಖಲಿಸಿ ನಾವು ಸಹಾಯ ಮಾಡುತ್ತೇವೆಂದು ತಿಳಿಸಿರುತ್ತಾರೆ. ಮಾರ್ಚ್ 2015 ರಿಂದ ಜನವರಿ 2018 ರವರೆಗೆ ಅರೋಪಿಯವರ ವ್ಯವಹಾರದಲ್ಲಿ ಒಟ್ಟು ರೂ 12,05,000-00 ಹಣವನ್ನು ವಿನಿಯೋಗ ಮಾಡಿರುವ ಬಗ್ಗೆ ತಿಳಿಸಿರುತ್ತೇನೆಂದರೆ ಸರಿ. ರೂ 1 ಲಕ್ಷ ಹಣವನ್ನು ಮಾರ್ಚ್ 2015 ರಲ್ಲಿ ಅರೋಪಿಯವರ ವ್ಯವಹಾರದಲ್ಲಿ ವಿನಿಯೋಗ ಮಾಡಿರುತ್ತೇನೆಂದರೆ ಸರಿ. ಸದರಿ ಹಣಕ್ಕೆ ಲಾಬ ಸಿಕ್ಕಿದ

ನಂತರ ಜನವರಿ 2016 ರಂದು ರೂ 2,05,000-00 ಹಣವನ್ನು ಅರೋಪಿಯವರ ವ್ಯವಹಾರದಲ್ಲಿ ವಿನಿಯೋಗ ಮಾಡಿರುತ್ತೇನೆಂದರೆ ಸರಿ. ಲಾಬಾಂಶದ ಸ್ವಲ್ಪ ಮೊತ್ತವನ್ನು ಪುನಃ ಅರೋಪಿಯವರ ವ್ಯವಹಾರದಲ್ಲಿ ವಿನಿಯೋಗ ಮಾಡಿ ಜೊತೆಗೆ ಮೇ 2016 ರಲ್ಲಿ ರೂ 2 ಲಕ್ಷ ಹಣ ಅವರ ವ್ಯವಹಾರದಲ್ಲಿ ವಿನಿಯೋಗ ಮಾಡಿರುತ್ತೇನೆಂದರೆ ಸರಿ. ಅರೋಪಿಯವರು ಅವರ ಯಾವ ಯಾವ ಸ್ನೇಹಿತರೊಂದಿಗೆ ವ್ಯವಹಾರವನ್ನು ನಡೆಸುತ್ತಿದ್ದಾರೆ ಎನ್ನುವ ವಿಚಾರವನ್ನು ನಾನು ತಿಳಿದುಕೊಳ್ಳಲಿಲ್ಲ.

4. 2015 ರಿಂದ 2018 ರವರೆಗೆ ನಾನು ಅರೋಪಿಯವರ ವ್ಯವಹಾರದಲ್ಲಿ ಹಣವನ್ನು ವಿನಿಯೋಗ ಮಾಡಿರುತ್ತೇನೆ. ಅರೋಪಿಯವರ ವ್ಯವಹಾರದಲ್ಲಿ ನಾನು ಒಟ್ಟು ರೂ 12,05,000-00 ಹಣವನ್ನು ವಿನಿಯೋಗ ಮಾಡಿರುವ ಬಗ್ಗೆ ತಿಳಿಸಿರುತ್ತೇನೆಂದರೆ ಸರಿ. ಈ ಪ್ರಕರಣವನ್ನು ರೂ 20 ಲಕ್ಷದ ವಿವಾದಿತ ಚೆಕ್ಕಿನ ವಿರುದ್ಧ ದಾಖಲಿಸಿರುತ್ತೇನೆಂದರೆ ಸರಿ. ರೂ 9,95,000-00 ಹಣ ನಾನು ವಿನಿಯೋಗ ಮಾಡಿದ ಹಣದ ಲಾಬಾಂಶ ಬರಬೇಕಾದ ಹಣವಾಗಿರುತ್ತದೆಂದರೆ ಸರಿ. ಅರೋಪಿಯವರಿಂದ ರೂ 2 ಲಕ್ಷ ಹಣ ನನಗೆ ಬಂದಿರುತ್ತದೆಂದರೆ ಸರಿ. ನಾನು ಹೂಡಿಕೆ ಮಾಡಿದ ರೂ 12,05,000-00 ಹಣದಲ್ಲಿ ಅರೋಪಿಯವರಿಂದ ನನಗೆ ರೂ 2 ಲಕ್ಷ ಹಣ ಬಂದಿರುತ್ತದೆಂದರೆ ಸರಿ.

5. ನಾನು ವಕೀಲರ ಮೂಲಕ ಕಳುಹಿಸಿದ ನೋಟೀಸು ಅರೋಪಿಯವರು ಮನೆ ಖಾಲಿ ಮಾಡಿದ ಕಾರಣ ನನಗೆ ಹಿಂದುರುಗಿರುತ್ತದೆಂದರೆ ಸರಿ. ನಿಪಿ6 ರ ದಾಖಲೆಯನ್ನು ಅರೋಪಿಯವರು ನಾವು ಹೂಡಿದ ಹಣದ ಸಲುವಾಗಿ ನೀಡಿರುತ್ತಾರೆ. ನಿಪಿ6 ರಲ್ಲಿ ನನ್ನ ಹಾಗೂ ನನ್ನ ಸ್ನೇಹಿತರ ಹೆಸರುಗಳು ಜಂಟಿಯಾಗಿ ತೋರಿಸಿರುತ್ತಾರೆಂದರೆ ಸರಿ. ನಿಪಿ6 ಅನ್ನು ನಾವು ಅರೋಪಿಯವರ ಬಳಿಯಿಂದ ಅವರು ಹಣ ಕೊಡಲು ಅಗದಿದ್ದಾಗ ಬರೆದು ಕೊಡಿಯೆಂದು ಬರೆಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಅರೋಪಿಯವರಿಂದ ಲಾಬಾಂಶ ನನಗೆ ಸಿಗುತ್ತದೆಂದು ನಾನು ಅವರ ವ್ಯವಹಾರದಲ್ಲಿ ಹಣವನ್ನು ಹೂಡಿಕೆ ಮಾಡಿರುತ್ತೇನೆಂದರೆ ಸರಿ. ಲಾಬಾಂಶವಾಗಿ ಅರೋಪಿಯವರು ನನಗೆ ರೂ 2 ಲಕ್ಷ ಹಣವನ್ನು ನೀಡಿರುತ್ತಾರೆಂದರೆ ಸರಿಯಲ್ಲ. ಒಮ್ಮೆ ಮಾತ್ರ ಅರೋಪಿಯವರು ನೀಡಿದ ಲಾಬಾಂಶದ ಹಣವನ್ನು ಪುನಃ ನಾನು ಅವರ ವ್ಯವಹಾರದಲ್ಲಿ ಅದನ್ನು ಪುನಃ ಹೂಡಿಕೆ ಮಾಡಿರುತ್ತೇನೆ. ಅರೋಪಿಯವರು ವ್ಯವಹಾರದಲ್ಲಿ ನಷ್ಟ ಅನುಬವಿಸಿರುವ ಕಾರಣ ನನಗೆ ಹಣ ಹಿಂದುರುಗಿಸಲು ಅವರು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ. ಅರೋಪಿಯವರಿಗೆ ಪೋಲೀಸರಿಗೆ ದೂರನ್ನು ನೀಡುತ್ತೇನೆಂದು ತಿಳಿಸಿ ಬೆದರಿಸಿ ವಿವಾದಿತ ಚೆಕ್ಕನ್ನು ಅವರಿಂದ ನಾನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ಬಳಿ ಅರೋಪಿಯವರ ವ್ಯವಹಾರದಲ್ಲಿ ಹೂಡಿಕೆ ಮಾಡಿದ ಹಣದಿಂದ ಲಾಬಾಂಶ ಬರುತ್ತಿದೆ ಎಂದು ತೋರಿಸಲು ದಾಖಲೆ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ.

ನಿಪಿ6 ರ ದಾಖಲೆಯನ್ನು ಹೊರತುಪಡಿಸಿ ಲಾಬಾಂಶ ಬರುತ್ತಿತ್ತು ಎಂದು ತೋರಿಸಲು ನನ್ನ ಬಳಿ ಬೇರೆ ದಾಖಲೆ ಇಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

(ವಾಣಿ ಎ. ಶೆಟ್ಟಿ)
17 ನೇ ಅಪರ ನ್ಯಾಯಾಧೀಶರು
ಮತ್ತು ಎಸಿಎಂಎಂ